# ದಿನ್ನೆಪ್ಪ ದೇವರು!

ದಿನ್ನೆಪ್ಪ ದೇವರು ಎಂದು ಪ್ರಸಿದ್ಧಿಗೊಂಡ ಈ ವಿಗ್ರಹ ಕೊಟ್ಟೂರಿನ ಕೋಗಳಿ ಗ್ರಾಮದಲ್ಲಿದೆ. ಈ ದೇವರನ್ನು ಭಕ್ತಿಯಿಂದ ಪೂಜಿಸಿ ಅನ್ನದಾನ ಮಾಡಿ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂಬುದು ಇಲ್ಲಿವರ ನಂಬಿಕೆ. ಈಚೆಗೆ ಪೂಜೆ, ಅನ್ನದಾನ ಮಾಡಿದ ಬಳಿಕ ಮಳೆ ಬಂದಿದ್ದು, ಕಾಕತಾಳೀಯ. ಈ ದಿನ್ನೆಪ್ಪ ಬೇರಾರೂ ಅಲ್ಲ. ಏಳುಹೆಡೆ ಸರ್ಪದ ರಕ್ಷೆಹೊಂದಿರುವ ಪಾರ್ಶ್ವನಾಥ! ಪೀಠ ಮೂರು ಅಡಿ, ವಿಗ್ರಹ ಒಂಭತ್ತು ಅಡಿ ಎತ್ತರವಿದೆ. ಕಪ್ಪುಶಿಲೆ ನಿರ್ಮಿತ ಈ ವಿಗ್ರಹದ ಕೆಳಗಡೆಯ ಎಡ ಭಾಗದಲ್ಲಿ ಯಕ್ಷಿ ಪದ್ಮಾವತಿ ಇದ್ದರೆ ಬಲಭಾಗದಲ್ಲಿ ಯಕ್ಷ ಧರಣೇಂದ್ರ ನೆಲೆಗೊಂಡಿದ್ದಾನೆ. ವಿಗ್ರಹದ ಮೇಲ್ಭಾಗದ ಇಕ್ಕೆಡೆಗಳಲ್ಲಿ ಪುಷ್ಪವೃಷ್ಟಿ ಮಾಡುತ್ತಿರುವ ದೇವರ ವಿಗ್ರಹಗಳಿವೆ. ಈ ವಿಗ್ರಹದ ಎರಡೂ ಕೈಗಳನ್ನು ಯಾರೋ ಕಿಡಿಗೇಡಿಗಳು ಮುರಿದಿದ್ದಾರೆ.


ದಿನ್ನೆಪ್ಪ ಅಲಿಯಾಸ್ ಪಾರ್ಶ್ವನಾಥನ ಬಗ್ಗೆ ನೋಡುವುದಾದರೆ 9ನೇ ಶತಮಾನದಲ್ಲಿ ಗಂಗದೊರೆ ದುರ್ವಿನೀತನೆಂಬುವವನು ವಿಗ್ರಹ ಸ್ಥಾಪಿಸಿದನಂತೆ. ಆತ ಜೈನಬಸದಿಯೊಂದನ್ನು ಕಟ್ಟಿಸಿ ಅಲ್ಲಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದ. ಎದುರಲ್ಲಿ ಸಭಾಮಂಟಪವಿದೆ. ಅದರಲ್ಲಿ ಕಪ್ಪು ನೀಲಿ ಮಿಶ್ರಿತ ಕಲ್ಲಿನ ಕಂಬಗಳಿವೆ. ಆ ರೀತಿಯ ಸುಮಾರು 501 ಕಂಬಗಳಿದ್ದವೆಂದು ಗ್ರಾಮದ ಹಿರಿಯರು ಹೇಳುತ್ತಾರೆ. ಆದರೆ ಈಗ ಅಲ್ಲಿ ಕಾಣುವುದು 21 ಮಾತ್ರ. ಇಂತಹ ದುಃಸ್ಥಿತಿ ಬಂದಿರುವುದು ಸಂರಕ್ಷಣೆಯ ಹೊಣೆ ಹೊತ್ತವರ ನಿರಾಸಕ್ತಿಯಿಂದ ಎಂದು ಅವರು ಹೇಳುತ್ತಿದ್ದಾರೆ.

ಕೋಗಳಿ ಸ್ಥಳದ ಬಗ್ಗೆ ನಡೆದಾಡುವ Encyclopedia ಎಂದೇ ಕರೆಯಲ್ಪಡುವ ಹುಬ್ಬಳ್ಳಿಯ ವೇದಗಣಿತಜ್ಞ ಎಂ. ಕೆ. ಶಿವಪ್ಪ ಅವರನ್ನು ಸಂಪರ್ಕಿಸಿದೆ. ಅವರ ಮಾಹಿತಿಯಂತೆ, ‘ಕೋಗಳಿ’, ‘ಕೋಗಳಿ 500’ ಎಂಬ ಪ್ರದೇಶದ ಕೇಂದ್ರಸ್ಥಾನ. ಅಂದಿನ ಕಾಲಘಟ್ಟದ ಅತ್ಯಂತ ಪ್ರಸಿದ್ಧಿ ಹೊಂದಿದ ಕ್ಷೇತ್ರ. ಸುತ್ತಮುತ್ತಲ 500 ಹಳ್ಳಿಗಳಿಗೆ ರಾಜಧಾನಿಯಾಗಿತ್ತು. ಅನೇಕ ರಾಜರು ಇದನ್ನು ಆಳಿದ್ದರಂತೆ. ಸಂಬಂಧಪಟ್ಟವರು ‘ಜಿನ್ನೆಪ್ಪನ’ ಮಂದಿರವನ್ನು ಜೀರ್ಣೋದ್ಧಾರ ಮಾಡಿ, ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂಬುದು ಹಳ್ಳಿಜನರ ಒಕ್ಕೊರಲ ಬೇಡಿಕೆ.

**–ಡಾ. ಹೆಚ್. ಎಂ. ಸದಾನಂದ, ಬೆಂಗಳೂರು**







## ತೊರಗ

ಉತ್ತರ ಕರ್ನಾಟಕದ ಕಡೆ ಮಹಾನವಮಿ ಹಬ್ಬದ ಸಮಯದಲ್ಲಿ ತೊರಗವನ್ನು ಮಾಡಿ ದೇವರ ಜಗುಲಿಯ ಮೇಲೆ ಬಿದಿರಿನ ಚೌಕಾನೆಗೆ ಕಟ್ಟುವುದು ವಾಡಿಕೆ. ಮೈದಾ ಹಿಟ್ಟಿಗೆ ಸ್ವಲ್ಪ ಬೆಲ್ಲದ ನೀರು, ಮೈದಾದ ಅರ್ಧದಷ್ಟು ಕಡಲೆಹಿಟ್ಟು, ಚಿಕ್ಕ ಚಮಚ ಎಣ್ಣೆ, ಉಪ್ಪು ಸೇರಿ ಚೆನ್ನಾಗಿ ನಾದಿ ಮೆದುವಾಗಿ ತಟ್ಟಿದರೆ ತೊರಗ ಒಂದು ರೂಪ ಪಡೆಯುತ್ತದೆ.

ನಾಮವೊಂದು ರೂಪ ಹಲವು ಎಂಬ ಮಾತಿನಂತೆ ಈ ತೊರಗಕ್ಕೂ ನಾನಾ ರೂಪವಿದೆ. ಲಟ್ಟಿಸಿದ ಹಿಟ್ಟಿನ ಮೇಲೆ ಚಿಕ್ಕ ಮಕ್ಕಳ ಅಂಗೈ ಇಟ್ಟು ಕೈಯ ಆಕಾರವಾಗಿ ಕತ್ತರಿಸಿ ಎಣ್ಣೆಯಲ್ಲಿ ಕರಿಯುವುದು ಒಂದು ರೂಪ. ಅಂತೆಯೇ ವೀಳ್ಯದ ಎಲೆ, ಹೆಣಿಗೆ, ಎರಡೆಲೆ ಮಾಡಿ ಹೆರಳು, ಬುಗುಡಿ, ಆನೆ, ಪೂರಿ ಇತ್ಯಾದಿ ಆಕಾರಗಳಾಗಿಯೂ ತೊರಗ ರೂಪ ಪಡೆಯುತ್ತದೆ.

ಮಹಾನವಮಿ ಹಬ್ಬದ ದಿನ ಬನ್ನಿ ಮುಡಿದು ಬಂದ ಹುಡುಗರು–ಪುರುಷರು ತಲೆಬಾಗಿಲ ಮುಂದೆ ಸಾಲಾಗಿ ನಿಂತು ಆರತಿ ಬೆಳಗಿಸಿಕೊಳ್ಳುತ್ತಾರೆ. ತಕ್ಷಣವೇ ಅವರೆಲ್ಲರೂ ಸೇರಿ ಜಗಲಿಯಡೆಗೆ ಓಡುತ್ತಾರೆ. ನಾನು, ನೀನು ಎನ್ನುತ್ತ ತೊರಗ ಹರಿದುಕೊಂಡು ತಿನ್ನುತ್ತಾರೆ. ಸ್ಪರ್ಧೆಗಿಳಿದಂತೆ ತೊರಗ ಕಿತ್ತುತಿನ್ನುವುದನ್ನು ನೋಡುವುದೇ ಒಂದು ಸಂಭ್ರಮ. ತೊರಗ ಸ್ವಲ್ಪ ಸಿಹಿಯಾಗಿರುತ್ತದೆ. ಇದು ರುಚಿಕರ. ಬನ್ನಿ ಕೊಡಲು ಬಂದ ಹೊರಗಿನ ಮಕ್ಕಳಿಗೂ ತೊರಗ ನೀಡಲಾಗುತ್ತದೆ.

**–ಸುರೇಶ ಭೋಸಲೆ, ಇಂಡಿ.**



# ಗೊನೆಯಲ್ಲೇ ತೆಂಗಿನಕಾಯಿ ಮೊಳಕೆ!

‘ಬೆಳೆವ ಸಿರಿ ಮೊಳಕೆಯಲ್ಲಿ ನೋಡು’ ಎನ್ನುವ ಮಾತೊಂದಿದೆ. ಇಲ್ಲಿ ನೋಡಿದರೆ ತೆಂಗಿನ ಮರದ ಸಿರಿಯಲ್ಲೇ ಕಾಯಿಗಳು ಮೊಳಕೆಯೊಡೆದಿವೆ!

ಸಾಮಾನ್ಯವಾಗಿ ತೆಂಗಿನಕಾಯಿಗಳು ಒಣಗಿ ಮರದಿಂದ ಕಿತ್ತ ನಂತರ ಮಣ್ಣಿನ ಮೇಲೆ ಅಥವಾ ನೀರಿನ ಆಸರೆಯಲ್ಲಿ ಮೊಳಕೆಯೊಡೆಯುವುದು ಸಹಜ. ಆದರೆ ಮಂಗಳೂರಿನ ದರೆಗುಡ್ಡೆಯ ನಮ್ಮ ತೋಟದ ಮನೆಯಲ್ಲಿ ಮರದಿಂದ ಕೀಳುವ ಮೊದಲೇ ಎರಡು ಗೊಂಚಲುಗಳಲ್ಲಿ ಒಣಗಿದ ತೆಂಗಿನ ಕಾಯಿಗಳು ಮೊಳಕೆಯೊಡೆದಿವೆ.

ಒಣಗಿದ ತೆಂಗಿನಕಾಯಿಗಳು ಮರದ ಗೊನೆಯಿಂದ ಬೇರ್ಪಡುವ ಮೊದಲೇ ಚಿಗುರೊಡೆದು ಅವಸರದಿಂದ ಬೆಳೆಯ ತೊಡಗಿರುವುದು ನಿಜಕ್ಕೂ ಅಚ್ಚರಿಯ ವಿಷಯ. ಹಾಗೆ ನೋಡಿದರೆ ಈ ಮರ ಕಾಯಿಬಿಟ್ಟಿದ್ದೂ ಅವಸರದಲ್ಲೇ. ಸಾಮಾನ್ಯವಾಗಿ ತೆಂಗಿನ ಮರಗಳು ಐದಾರು ವರ್ಷ ಬೆಳೆದ ನಂತರ ಫಲ ನೀಡಿದರೆ ಈ ಮರ ಒಂದೂವರೆ ವರ್ಷದಲ್ಲೇ ಕಾಯಿ ಬಿಟ್ಟಿದ್ದು ಮತ್ತೊಂದು ಅಚ್ಚರಿ. ಆಧುನಿಕ ಕ್ಷಿಪ್ರ ಕಾಲಗತಿಯಲ್ಲಿ ಎಲ್ಲವೂ ಅವಸರದಲ್ಲೇ ಕಾರ್ಯಗತಗೊಳ್ಳುತ್ತಿದೆ ಅನ್ನುವುದಕ್ಕೆ ಪ್ರಕೃತಿಯೂ ಸಮ್ಮತಿಯಿತ್ತಿರುವಂತಿದೆ.

**–ರಮಣ್ ಶೆಟ್ಟಿ ರೆಂಜಾಳ್, ಮುಂಬೈ**